# ಅಚ್ಯುತಾನಂತ ಗೋವಿಂದನೆಂಬ ವಸ್ತು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 06.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao.

ರಾಗ: ಉದಯರಾಗ ತಾಳ: ಛಾಪು

ಅಚ್ಯುತಾನಂತ ಗೋವಿಂದನೆಂಬ ವಸ್ತು ಎನ್ನ ಕೈಸೇರಿತು || ಪ ||
ಎಷ್ಟು ಪುಣ್ಯವ ಮಾಡಿದೆನೊ ಪರವಸ್ತು ಎನ್ನ ಕೈ ಸೇರಿತು || ಅಪ ||

ವೆಚ್ಚವ ಮಾಡಲಾಗದು ಇದು ಮುಚ್ಚಿ ಬಚ್ಚಿಡಲಾಗದು
ಹೊತ್ತಾರೆದ್ದು ಕೀರ್ತನೆ ಮಾಡುವ ವಸ್ತು ಎನ್ನ ಕೈ ಸೇರಿತು || 1 ||

ಕ್ಷೀರ ಸಾಗರದಮೃತವ ತಂದ ಕಾಮಧೇನು ಕೈಯ ಸೇರಿತು
ನೀಲವರ್ಣನಾದ ಪಾಲಿಪ ಹೊಸ ದಿವ್ಯ ನೀಲ ಮಾಣಿಕ್ಯ ಕೈಯ ಸೇರಿತು || 2 ||

ಸುರ ಮುನಿಗಳು ಕೂಡಲು ಇದು ಹರಳಿಗೆ ಬೆಲೆಯಾಗದು
ವರದ ಪುರಂದರ ವಿಠಲ ರಾಯನೆಂಬ ಒಡವೆ ಎನ್ನ ಕೈಯ ಸೇರಿತು || 3 ||

**Classification:** Keerthane
**Ankita:** varada purandara vittala
**Location:** NA
**Category:** Vishnu Stuti
**Sub-Category:** Vishnu, Achyuta, Ananta, govinda, punya, amruta, halu, kamadhenu, muni, kai, Samudra, divya, sura, abharana,
**Pravachana:** NA
**Explanation:** NA